Sri C. M. POONACHA.—It was celebrated as a national festival throughout the State and no income is anticipated.

Sri A. R. PANCHAGAVI.—Is this procession affair going to be a permanent feature? What is the view of the Government?

Sri C. M. POONACHA.—The usual programmes will be continued. There is no change likely.

Sri C. K. RAJAIAH SETTY.—Is it not a fact that before the commencement of Dasara there was an announcement that there would not be procession and later on there was another announcement that there would be procession?

Mr. SPEAKER.—That does not arise now.

ಶ್ರೀ ಜಿ. ಶಿವಪ್ಪ.—ಇಡ್ಡೆರೆಕ್ಕಾಗಿ ದನರಾ ಕಾಲದಲ್ಲಿ ಸರ್ಕಾರಕ್ಕೆ ರೈಲ್ವೆ ಮತ್ತು ಬಸ್ಸುಗಳ ಮುಖಾಂತರ ಲಾಭ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಸಿ. ಎಂ. ಪೂಣಚ್ಚ.—ಆ ಉತ್ಪತ್ತಿಯನ್ನು ಅಳೆಯುವ ಯಾವ ವಿಧವಾದ ಸಾಧನವೂ ನಮ್ಮಲ್ಲಿ ಇಲ್ಲ. ಅಂತೂ ತುಂಬಾ ಪ್ರೇಕ್ಷಕರು ಎಲ್ಲಾ ಭಾಗಗಳಿಂದಲೂ ಬಂದಿರುವುದುಂಟು. ಆ ಸಂಬಂಧವಾಗಿ ಕೊಂಚ ಹಣ ಬಂದಿದೆಯೆಂಬುದು ಒಪ್ಪಬೇಕಾದ ವಿಷಯ.

Sri C. K. RAJAIAH SETTY.—May I know the exact answer from the Minister to my question?

Mr. SPEAKER.—It has been discussed.

Sri C. K. RAJAIAH SETTY.—Not discussed.

Mr. SPEAKER.—You are only eliciting information.

Sri G. VENKATAI GOWDA.—May I know the reason for the change?

Mr. SPEAKER.—It is a similar question.

ಶ್ರೀ ಪುಟ್ಟೇಗೌಡ.—(b) ಪ್ರಶ್ನೆಗೆ ಉತ್ತರವಾಗಿ ರಾಜ್ಯ ಸರ್ಕಾರದವರಿಗೆ ರೂಪಾಯಿ 27,039-04 ನಯಾ ಪೈಸೆ ವೆಚ್ಚ ತಗಲಿದೆಯೆಂದು ಹೇಳಿರುವುದು ಯಾವ ಹೆಡ್‌ಗೆ ಸೇರಿದೆ?

Sri C. M. POONACHA.—The expenditure indicated of Rs. 27,000 was incurred in connection with the procession, The entire celebrations at Mysore highlighted with other activities has cost a sum of Rs. 1,46,000 and odd in which this amount of Rs 27,000 is also included.

ಶ್ರೀ ಜಿ. ವೆಂಕಟೇಗೌಡ.—ಖರ್ಚಾಗಿರುವ ಅಷ್ಟೂ ಹಣಕ್ಕೆ ತಪಶೀಲನ್ನು ಹೇಳುತ್ತೀರಾ?

Sri C. M. POONACHA.—Special illumination is a very big item. That is the usual expenditure incurred in connection with the illumination of the route up to Banni Mantap. All this means quite a lot of expenditure.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಸದನ್ಯರಿಗಾಗಿ ಖರ್ಚಾಗಿರುವುದೂ ಸಹ ತಾವು ಉತ್ತರದಲ್ಲಿ ತಿಳಿಸಿರುವ ಮೊಬಲಗಿನಲ್ಲಿ ಸೇರಿದೆಯೇ?

ಶ್ರೀ ಸಿ. ಎಂ. ಪೂಣಚ್ಚ.—ಅದರಲ್ಲಿ ಸೇರಿಸಬೇಕಾದ ಪ್ರಮೇಯವೇ ಇಲ್ಲ. ಅದು ಮಾನ್ಯನದನ್ಯರಿಗೇ ಗೊತ್ತಿರಬಹುದು.

ಶ್ರೀ ಇ. ನಾರಾಯಣಗೌಡ.—1958-59 ರಲ್ಲೂ ಕೂಡ ಇದೇರೀತಿ ಸರ್ಕಾರ ಈ ನಾಡ ಹಬ್ಬವನ್ನು ಮುಂದುವರಿಸುತ್ತದೆಯೆ?

ಶ್ರೀ ಸಿ. ಎಂ. ಪೂಣಚ್ಚ.—ನಡೆಸಬೇಕೆಂಬ ಉದ್ದೇಶವಿದೆ.

Relief Measures undertaken in scarcity Areas in Tumkur District.

Q.—3482. Sri K. P. REVANNA SIDDAPPA (Tiptur).—

Will the Government be pleased to state:—

(*a*) whether they are aware of the fact that crops have dried up in Tumkur district on account of failure of Mungari Monsoon this year;

(*b*) whether they have received reports from the concerned local officers in this regard;

(*c*) whether they are also aware of the hardships to which cattle have been put for want of fodder in scarcity areas in general and particularly in Tiptur Sub-Division;

(*d*) whether they are also aware of the distress condition of ryots in this place due to anticipation of scarcity;

(*e*) the nature of relief measures taken by them in the famine stricken or scarcity areas this year?

A.—Sri M. P. PATIL (Minister for Revenue).—

(*a*) In certain parts of the district the crops had dried up but they have since revived due to subsequent rains.

(*b*) Yes.

(*c*) There is no scarcity of fodder in this district.

(SRI M. P. PATIL)

(*d*) Conditions in certain areas of the district have not been statisfactory.

(*e*) Government have so far sanctioned a sum of Rs. 1,25,000 for taking up relief works in the affected areas of the district. The relief works are taken up on the advice of the Distress Relief Committee constituted for this district. An amount of Rs. 5,000 has also been sanctioned for providing amenities like shelter, drinking water, etc., in the affected areas. Takavi loans are being granted liberally and tank beds are given for Eksal cultivation in deserving cases.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಕ್ಷಾಮ ಪ್ರದೇಶ ವೆಂದು ಸಾರಬೇಕಾದರೆ ಎಂಥ ಪರಿಸ್ಥಿತಿಯಿರ ಬೇಕು, ಸ್ವಾಮಿ ?

*ಶ್ರೀ ಎಂ. ಪಿ. ಪಾಟೀಲ್.—ಮಳೆ ಬಿದ್ದಿರ ಬಾರದು, ಬೆಳೆ ಆಗಿರಬಾರದು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತಿಪಟೂರು ತಾಲ್ಲೂಕಿನಲ್ಲಿ ಮಳೆ ಬಾರದೆ ಬೆಳೆಯಾಗಲಲ್ಲ. ಅಲ್ಲೇನು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎಂ. ಪಿ. ಪಾಟೀಲ್.—ಅಲ್ಲಿ ಮಳೆ ಬಿದ್ದಿದೆ, ಬೆಳೆ ಬಂದಿದೆ, ಕೆಲವು ದಿವಸಗಳವರೆಗೆ ಮಾತ್ರ ಮಳೆ ಆಗಿದ್ದಿಲ್ಲ. ಆಗ ಬೆಳೆ ಕೆಡುವುದರಲ್ಲಿತ್ತು. ಅಷ್ಟರಲ್ಲೇ ಮಳೆ ಬಂದು ಬೆಳೆ ಚೆನ್ನಾಗಿ ಆಯಿತು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅಲ್ಲಿ ಪೈರು ಒಣಗಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಒಣಗಿ ಹೋಗಿದ್ದುದು ಪುನಃ ಚೇತರಿಸಿಕೊಂಡಿದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಎಷ್ಟಾಣೆ ಬೆಳೆ ಬಂದರೆ ಕ್ಷಾಮ ಬಂದಿದೆಯೆಂದು ಸಾರಲಾಗುವುದು ?

ಶ್ರೀ ಎಂ. ಪಿ. ಪಾಟೀಲ್.—ಮುಂಬಯಿ ಕರ್ನಾಟಕದಲ್ಲಿ ಮತ್ತು ಹೈದರಾಬಾದು ಪ್ರದೇಶದಲ್ಲಿ ಇರುವ ರೂಲ್ಸ್ ಪ್ರಕಾರ ನಾಲ್ಕಾಣೆಗಿಂತ ಕಡಿಮೆ ಬೆಳೆಯಾದರೆ ಅಸೆಸ್‌ಮೆಂಟ್ ನಸ್ಪೆಂಡ್‌ಮಾಡಿ ಆ ರೀತಿ ಭಾವಿಸಬೇಕೆಂದಿದೆ. ಇಲ್ಲಿ ಆ ನಿಯಮವಿಲ್ಲ. ಈಗ ಅದನ್ನು ಅನುಸರಿಸುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಇಷ್ಟು ಬೆಳೆಯಾಗಿದೆ ಎಂದು ಬರೆಯುವವರು ಯಾರು ?

ಶ್ರೀ ಎಂ. ಪಿ. ಪಾಟೀಲ್.—ಅನಿವಾರ್ಯವಾದರೆ ಪಿಕ್ ಪಹಣಿಯೆಂದು ನಂಸ್ಥಾನದ ಬೆಳೆ ನೋಡಿ ಬರೆಯುತ್ತಾರೆ. ತಾವು ಹೇಳುವುದು ಅದೇ ಇರ ಬೇಕೆಂದು ಕಾಣುತ್ತದೆ. ಎಕ್ಸ್‌ಪೆರಿಮೆಂಟ್ ಮಾಡಿ ಎಷ್ಟಾಣೆ ಬೆಳೆ ಆಗಬಹುದೆಂದು ಬರೆಯುತ್ತಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅದನ್ನು ಹಳ್ಳಿ ಹಳ್ಳಿಯಲ್ಲೂ ಮಾಡುತ್ತಾರೆಯೆ ?

ಶ್ರೀ ಎಂ. ಪಿ. ಪಾಟೀಲ್.—ಒಂದೊಂದು ಹಳ್ಳಿ ಯಲ್ಲೂ ಎರಡು ಮೂರುಕಡೆ ಮಾಡುತ್ತಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತಾಲ್ಲೂಕುಗಳಲ್ಲಿ ಒಂದು ಮ್ಯಾಪ್‌ಮೇಲೆ ಗೆರೆ ಎಳೆದು ಹೋಬಳಿಗೊಂದು ಕಡೆ ಮಾಡುವುದು ಸರ್ಕಾರದ ಅವಗಾಹನೆಗೆ ಬಂದಿದೆಯೆ ?

ಶ್ರೀ ಎಂ. ಪಿ. ಪಾಟೀಲ್.—ಒಂದು ವ್ಯವಸ್ಥೆಯಿದೆ. ಅದರ ಪ್ರಕಾರ ಮಾಡುತ್ತಾರೆ. ಈ ಬಗ್ಗೆ ಇರುವ ಪ್ಯಾಂಫ್ಲೆಟ್ ತಾವು ನೋಡಬಹುದು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಒಂದೂರಿನಲ್ಲಾ ಗುವ ಮಳೆ ಇನ್ನೊಂದುಕಡೆ ಆಗುವುದಿಲ್ಲವೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ಪಿ. ಪಾಟೀಲ್.—ಅದನ್ನು ತಡೆಯುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಪರಿಹಾರ ಕಾಂಗಾರಿ ಎಲ್ಲೆಲ್ಲಿ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಲಾಗಿದೆ ?

ಶ್ರೀ ಎಂ. ಪಿ. ಪಾಟೀಲ್.—ಬರಗಾಲ ಬಂದಿರುವ ಕಡೆ ತೆಗೆದುಕೊಳ್ಳಬೇಕೆಂದಿದೆ. ಒಟ್ಟು ತುಮಕೂರು ಜಿಲ್ಲೆಯಲ್ಲಿ 33 ಕಡೆಗಳಲ್ಲಿ ಕಾಂಗಾರಿಗಳನ್ನು ತೆಗೆದು ಕೊಂಡಿದೆ. ಅದರ ದೆಶೆಯಿಂದ 1,25,000 ರೂಪಾಯಿ ಗಳನ್ನು ತುಮಕೂರು ಡಿಸ್ಟ್ರಿಕ್ಟಿಗೆ ಮಂಜೂರ ಮಾಡಿದೆ. ಆ ಪ್ರಕಾರ ಎರಡು-ಮೂರು ತಿಂಗಳವರೆಗೆ ಕೆಲಸ ನಡೆದಿದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಆ ಮೊಬಲಗನ್ನು ಪೂರ್ತಿ ಖರ್ಚುಮಾಡುವುದಕ್ಕೆ ಅವಕಾಶ ಕೊಡುತ್ತೀರಾ ದೇವರು ?

ಶ್ರೀ ಎಂ. ಪಿ. ಪಾಟೀಲ್.—ತಾವು ತುಮಕೂರು ಡಿಸ್ಟ್ರಿಕ್ಟ್ ರಿಲೀಫ್ ಕಮಿಟಿಯ ಸದಸ್ಯರಿದ್ದೀರಿ ತಮಗೆ ಶಿಫಾರ್ಸುಮಾಡುವ ಅಧಿಕಾರವಿದೆ. ತಮ್ಮ ಶಿಫಾರಸಿನ ಪ್ರಕಾರ ಸರ್ಕಾರ ಮಂಜೂರು ಮಾಡುತ್ತದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನಾವು ಶಿಫಾರ್ಸು ಮಾಡಿದ್ದೇವೆ, ದೇವರು.

ಶ್ರೀ ಎಂ. ಪಿ. ಪಾಟೀಲ್.—ಈಗ ಕೊಟ್ಟಿರುವ 1,25,000 ರೂಪಾಯಿಗಳು ಇನ್ನೂ ಖರ್ಚಾಗಿಲ್ಲ.

ಶ್ರೀ ಯು. ಎಸ್. ನಾಯಕ್.—On a point of order, Sir. ಶ್ರೀ ರೇವಣ್ಣಸಿದ್ದಪ್ಪನವರು 'ದೇವರು' ಎಂದು ಅಡ್ರೆಸ್ ಮಾಡಿದರು. ಅದು ಬಹಳ ಆಶ್ಚರ್ಯವಾಗಿ ಕಾಣುತ್ತದೆ. ಅದು ಔಟ್ ಮೋಡೆಡ್.

ಅಧ್ಯಕ್ಷರು.—ಇದಕ್ಕೆ ಹಿಂದೆಯೇ ರೂಲಿಂಗ್ ಕೊಟ್ಟಿದ್ದೆ. ಇಲ್ಲಿ "ದೇವರು" ಎಂದು ಕರೆಯು ವುದು ರೂಢಿಯಲ್ಲಿದೆ. ದಕ್ಷಿಣ ಕನಡಾದಿಂದ ತಾವು ಬರುವುದರಿಂದ ತಮಗೆ ಆಶ್ಚರ್ಯವಾಗಬಹುದು. ಇದು ಹಳೆಯ ಮೈಸೂರಿನವರಿಗೆ ಆಶ್ಚರ್ಯಕರವಾಗಿ ಕಾಣುವುದಿಲ್ಲ. ತಾವೂ ಬೇಕಾದರೆ ಹಾಗೆಯೇ ಕರೆಯ ಬಹುದು. ಬಹಳ ದಿವಸದಿಂದ ಹಳೆಯ ಮೈಸೂರಿನಲ್ಲಿ ಇದು ರೂಢಿಯಲ್ಲಿದೆ.

ಶ್ರೀ ಕೆ. ಕೆಂಚಪ್ಪ.—ಜಿಲ್ಲೆಯ ಕೆಲವು ಭಾಗ ಗಳಲ್ಲಿ ಬೆಳೆಗಳು ಒಣಗಿಹೋಗಿದ್ದವು, ಆದರೆ ನಂತರ ಮಳೆ ಬಿದ್ದುದರಿಂದ ಬೆಳೆಗಳು ಚೇತರಿಸಿಕೊಂಡಿವೆ ಎಂದು (*a*) ಉತ್ತರದಲ್ಲಿ ಹೇಳಿದೆ. ಏತಕ್ಕಾಗಿ ಚೇತರಿಸಿಕೊಂಡವು ಎಂಬುದಕ್ಕೆ ಕಾರಣ ಏನು ಎಂಬು ದನ್ನು ಕಂಡುಹಿಡಿದಿದ್ದೀರಾ ?

ಶ್ರೀ ಎಂ. ಪಿ. ಪಾಟೀಲ್.—ಮಳೆ ಬಂದುದರಿಂದ.

ಶ್ರೀ ಜಿ. ಎಸ್. ಪುಟ್ಟಣ್ಣ.—ಯಾವ ಯಾವ ತಾಲ್ಲೂ ಕಿಗೆ ಎಷ್ಟೆಷ್ಟು ಹಣ ಪರಿಹಾರ ಕಾಮಗಾರಿಗಳ ನಲು ವಾಗಿ ಕೊಟ್ಟಿದ್ದೀರಿ ?

ಶ್ರೀ ಎಂ. ಪಿ. ಪಾಟೀಲ್.—ತಾಲ್ಲೂಕು ಪ್ರಕಾರ ಅಂಕಿಗಳು ನನ್ನ ಹತ್ತಿರವಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಕೋರ ಮತ್ತು ಬೆಳ್ಳಾವೆ ಪ್ರದೇಶದಲ್ಲಿ ವಿಪರೀತ ಕ್ಷಾಮ ಪರಿಸ್ಥಿತಿ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಬಂದಿಲ್ಲ. ಆದರೆ ಹಿಂದೆ ಅಲ್ಲಿ ಕ್ಷಾಮ ಪರಿಸ್ಥಿತಿ ಇತ್ತು. ಆಗ್ಗೆ ಪರಿಹಾರ ಕಾಮಗಾರಿಗಳನ್ನು ಅಲ್ಲಿ ನಡೆಸಲಾಗಿತ್ತು. ಅವುಗಳನ್ನು ಸರಕಾರ ತಾನಾಗಿಯೇ ಬಂದ ಮಾಡಲಿಲ್ಲ. ಸುಗ್ಗಿಯಕಾಲದಲ್ಲಿ ಕೂಲಿಕಾರರು ಕೆಲಸಕ್ಕೆ ಬರಲಿಲ್ಲ. ಕೆಲಸಕ್ಕೆ ಜನರು ಇಲ್ಲದ ಮೂಲಕ ಪರಿಹಾರ ಕಾಮಗಾರಿ ಕೆಲಸ ನಿಂತುಹೋಯಿತು.

ಶ್ರೀ ಜಿ. ಎಸ್. ಪುಟ್ಟಣ್ಣ.—ಕೆಲಸ ಸ್ಟಾಪ್‌ಮಾಡ ಬೇಕು ಎಂದು ಆರ್ಡರ್ ಕೊಟ್ಟಿಲ್ಲವೇ ?

ಶ್ರೀ ಎಂ. ಪಿ. ಪಾಟೀಲ್.—ಆರ್ಡರ್ ಕೊಟ್ಟಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಹಾಗಾದರೆ ಕೆಲಸ ಏಕೆ ಸ್ಟಾಪ್ ಆಗಿದೆ ?

ಶ್ರೀ ಎಂ. ಪಿ. ಪಾಟೀಲ್.—ಇದು ಜಿಲ್ಲಾ ಸದಸ್ಯರಿಗೆ ಸಂಬಂಧಪಟ್ಟ ವಿಷಯ. ಮಾನ್ಯ ಸದಸ್ಯರು Distress Relief Committee ಯ ಸದಸ್ಯರಾಗಿದ್ದಾರೆ. ಪರಿಹಾರ ಕಾಮಗಾರಿಗಳನ್ನು ನಡೆಸುವುದು ಸದಸ್ಯರ ಕರ್ತವ್ಯವಾಗಿದೆ. ಕಾಮಗಾರಿ ನಡೆಯುತ್ತಾ ಇತ್ತು. ಕೂಲಿಕಾರ ಜನರು ಬಾರದೇ ಇರುವದರಿಂದ ಕೆಲಸ ನಿಂತುಹೋಗಿದೆ. ಪುನಃ ಕಾಮಗಾರಿ ಪ್ರಾರಂಭಿಸಬೇಕಾದುದು Distress Relief Committee ಯವರ ಕೆಲಸವಾಗಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ನೂರಾರು ಜನರು ಕೆಲಸಕ್ಕೆ ಬರಲು ಸಿದ್ಧರಾಗಿದ್ದಾರೆ. ಆದರೆ ಡೆಪ್ಯುಟಿ ಕಮೀಷನರರು ಕೆಲಸ ಸ್ಟಾಪ್‌ಮಾಡಬೇಕೆಂದು ಆರ್ಡರ್ ಮಾಡಿದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಜಾಗ್ರತೆಯಾಗಿ ಪುನಃ ಕಾಮಗಾರಿ ಪ್ರಾರಂಭಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—ಅದಕ್ಕೆ procedure ಆಗಲೇ ಹೇಳಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಬೆಳೆ ಒಣಗಿ ಹೋದುದು ಯಾವ ಯಾವ ಭಾಗದಲ್ಲಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ನಾನು ಎರಡು-ಮೂರು ತಾಲ್ಲೂಕುಗಳಿಗೆ ಮಾತ್ರ ಹೋಗಿ ಸ್ವತಃ ನೋಡಿದ್ದೇನೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ನೀವು ಹೊಗಿ ನೋಡಿದಂಥಾ ಭಾಗದಲ್ಲಿ ಜನರ ಜೀವನಕ್ಕೆ ಒಂದೆರಡು ತಿಂಗಳ ಮಟ್ಟಿಗೆ ಸಾಕಾಗುವಷ್ಟು ಬೆಳೆ ಬಂದಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಸಾಕಾಗುವಷ್ಟು, ಬೇಕಾಗುವಷ್ಟು ಬೆಳೆ ಬಂದಿದೆ ಎಂಬ ಪ್ರಶ್ನೆ ಈಗ ಇಲ್ಲ. ನಾಲ್ಕಾಣೆಗಿಂತ ಕಡಿಮೆ ಬೆಳೆ ಬಂದರೆ ಅಸೆಸ್‌ಮೆಂಟ್ ಸಸ್ಪೆಂಡ್‌ಮಾಡುವ ಪರಿಸ್ಥಿತಿ ಉದ್ಭವಿಸುತ್ತದೆ. ಅಂಥ ಸಂದರ್ಭದಲ್ಲಿ ಬರಗಾಲ ಪರಿಹಾರ ಕಾಮಗಾರಿಗಳನ್ನು ನಡೆಸಲಾಗುತ್ತದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ತಾವು ಈಗ ತಾನೆ ನಾಲ್ಕಾಣೆಗಿಂತ ಕಡಿಮೆ ಬೆಳೆ ಬಂದಿದೆ ಎಂದು ಒಪ್ಪಿಕೊಂಡಿದ್ದೀರಿ ; ಹಾಗಾದರೆ.....

ಶ್ರೀ ಎಂ. ಪಿ. ಪಾಟೀಲ್.—ನಾನು ಒಪ್ಪಿ ಕೊಂಡಿಲ್ಲ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ನಾಲ್ಕಾಣೆ ಬೆಳೆಯಿಂದ ಎಷ್ಟು ತಿಂಗಳುಗಳವರೆಗೆ ಜನರು ಜೀವನ ಮಾಡಬಲ್ಲರು ?

ಶ್ರೀ ಎಂ. ಪಿ. ಪಾಟೀಲ್.—ಎಷ್ಟು ತಿಂಗಳ ವರೆಗೆ ಜೀವನ ಮಾಡುವುದು ಎಂಬ ಪ್ರಶ್ನೆ ಅಲ್ಲ. ಬೆಳೆ ಎಷ್ಟು ಆಣೆ ಬಂದಿದೆ ಎಂಬುದನ್ನು ನೋಡಿ ನಾಲ್ಕು ಆಣೆಗಿಂತ ಕಡಿಮೆ ಬಂದಿದ್ದರೆ ಆಗ ಅಸೆಸ್‌ಮೆಂಟ್ ಸಸ್ಪೆಂಡ್‌ಮಾಡಬೇಕು ಎಂಬ ತೀರ್ಮಾನ ತೆಗೆದುಕೊಳ್ಳ ಬೇಕಾಗುತ್ತದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈಗ ಆ ಪ್ರದೇಶದಲ್ಲಿ ಜನರಿಗೆ ಜೀವನ ನಡೆಸುವುದು ಕಷ್ಟವಾಗಿದೆ. ಪರಿಹಾರ ಕಾಮಗಾರಿ ಅತ್ಯಗತ್ಯವಾಗಿ ಪ್ರಾರಂಭಿಸಬೇಕಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಸರ್ಕಾರದ ಗಮನಕ್ಕೆ ಬಂದಿಲ್ಲ. ಒಂದುವೇಳೆ ಸದಸ್ಯರ ಗಮನಕ್ಕೆ ಆ ರೀತಿ ಬಂದಿದ್ದರೆ ಏನುಮಾಡಬೇಕು ಎಂಬುದಕ್ಕೆ procedure ಆಗಲೇ ನಾನು ಹೇಳಿದ್ದೇನೆ. ಜಿಲ್ಲಾ ಕಮಿಟಿ ಇದೆ. ಆ ಕಮಿಟಿಯಲ್ಲಿ ಸದಸ್ಯರಾಗಿರುವ ತಮ್ಮೆಲ್ಲರ ಕರ್ತವ್ಯವಾಗಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ ಪ್ರದೇಶದಲ್ಲಿ ಒಂದೆರಡು ತಿಂಗಳುಗಳ ಮಟ್ಟಿಗೆ ಜೀವನ ನಡೆಸುವುದಕ್ಕೆ ಸಾಧ್ಯವಿರುವಷ್ಟು ಬೆಳೆ ಬಂದಿದೆ. ಮೇ, ಜೂನ್ ತಿಂಗಳುಗಳಲ್ಲಿ ವಿಶೇಷ ತೊಂದರೆ ಆ ಪ್ರದೇಶದಲ್ಲಿ ಉಂಟಾಗುತ್ತದೆ. ಆ ವೇಳೆಗೆ ಯಾವ ಬೆಳೆಯೂ ಬರುವುದಿಲ್ಲ; ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕು, ಎಂದು ತೀರ್ಮಾನ ಮಾಡಿದ್ದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಂ. ಪಿ. ಪಾಟೀಲ್.—ಮೊದಲು ನೀವು ತೀರ್ಮಾನಮಾಡಬೇಕಾಗಿದೆ. ಜಿಲ್ಲಾ ಕಮಿಟಿಯಲ್ಲಿ ಆ ರೀತಿ ತೀರ್ಮಾನಮಾಡಿ ಕಳಿಸಿರಿ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈಗಾಗಲೇ ಕಳಿಸಿರತಕ್ಕಂಥಾದ್ದು, ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಬಂದಿಲ್ಲ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಹಿಂದೆ ತೀರ್ಮಾನಮಾಡಿ ಕಳುಹಿಸಿದ ಪ್ರಕಾರ ರಿಲೀಫ್ ಕಾಮಗಾರಿ ಪ್ರಾರಂಭಿಸುವುದಕ್ಕೆ ಗಮನಕೊಡುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—ಅವಶ್ಯಕವಾಗಿ ಆ ಬಗ್ಗೆ ವಿಚಾರಮಾಡುತ್ತೇವೆ.

Sri H. V. KOUJALGI.—May I know whether Government have declared any villages as scarcity stricken villages or akin to scarcity villages in this district ?

Sri M. P. PATIL.—These two things are different. . . . . .

Sri H. V. KOUJALGI.—I want to know whether Government have declared any villages as scarcity stricken or akin to scarcity stricken. I do not want any definition.

Sri M. P. PATIL.—Akin to scarcity stricken.

Sri H. V. KOUJALGI.—How many villages ?

Sri M. P. PATIL.—That number is not with me.

Sri H. V. KOUJALGI.—May I know whether there are local officers' reports indicating how many are scarcity stricken villages and how many are akin to scarcity stricken villages ?

Sri M. P. PATIL.—That information is not with me.

Sri G. N. PUTTANNA.—'An amount of Rs. 5,000 has also been sanctioned for providing amenities like shelter, drinking water, etc., in the affected areas' ಎಂದು ಉತ್ತರದಲ್ಲಿ ಹೇಳಿದೆ. ಆದರೆ ಈ ಹಣ ದಲ್ಲಿ ಒಂದು ಕಾಸು ಕೂಡ ಖರ್ಚುಮಾಡಿಲ್ಲ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ವಿಶೇಷ ಸಂದರ್ಭ ಒದಗಿದರೆ, emergency ಬಂದರೆ, shelter, drinking water ವ್ಯವಸ್ಥೆಗಾಗಿ ಈ ಹಣವನ್ನು ಒದಗಿಸಲಾಗಿದೆ. ಹಾಗೆ ವಿಶೇಷ ಪರಿಸ್ಥಿತಿ ಉದ್ಭವ ವಾಗದೇ ಇದ್ದರೆ, ಈ ಹಣ ಖರ್ಚಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಎಸ್ಪಿಮೇಟು ಜಾಗ್ರತೆ ಮುಂಜೂರು ಆಗಲಿಲ್ಲ. ಜಾಗ್ರತೆ ಮುಂಜೂ ರಾಗಿದ್ದರೆ ಕಾಮಗಾರಿ ನಡೆಯುತ್ತಿದ್ದವು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಎಷ್ಟೋ ಕಾಮಗಾರಿ ಗಳು ಇವೆ. ರೆವೆನ್ಯೂ ಡಿಪಾರ್ಟ್‌ಮೆಂಟಿನವೂ ಇವೆ; ಲೋಕಲ್ ಬೋರ್ಡಿನಿಂದ ತೆಗೆದುಕೊಂಡದ್ದೂ ಇವೆ; ಪಿ.ಡಬ್ಲ್ಯೂ.ಡಿ. ಕಾಮಗಾರಿ ಇವೆ. ಯಾವ ಕಾಮ ಗಾರಿಯ ಬಗ್ಗೆ ಎಂದು ನಿರ್ದಿಷ್ಟವಾಗಿ ಹೇಳಿದರೆ ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಜಾಗ್ರತೆ ಎಸ್ಟಿ ಮೇಟ್ ಸ್ಯಾಂಕ್ಷ್ಞ ಆಗಿ ಮುಂಜೂರುಮಾಡಿದ ಹಣ ಪೂರ್ತಿಯಾಗಿ ಖರ್ಚಾಗದಿರುವುದಕ್ಕೆ ಕಾರಣವೇನು ?

ಶ್ರೀ ಎಂ. ಪಿ. ಪಾಟೀಲ್.—ಹಣ ಉಳಿದದ್ದಕ್ಕೆ ಕಾರಣ ಬೇರೆ ಇದೆ. ಎಸ್ಟಿಮೇಟು ಸ್ಯಾಂಕ್ಷನ್ ಆಗಿ ಕಾಮಗಾರಿ ಪ್ರಾರಂಭಿಸಿದರೂ ಜನರು ಬಾರದೇ ಇರುವುದರಿಂದ ಕೆಲಸ ಬಂದ್ ಆಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಯಾವ ಯಾವ ಪ್ರದೇಶದಲ್ಲಿ ಬೆಳೆ ಹೋಗಿದೆ, ಎಲ್ಲೆಲ್ಲಿ ಪರಿಹಾರ ಕಾಮಗಾರಿ ತೆಗೆದುಕೊಳ್ಳಬೇಕು ಎಂದು ಏನಾದರೂ ರಿಪೋರ್ಟು ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಮಳೆ ಪೂರ್ತಿ ಎಲ್ಲಿಯೂ ಹೋಗಿಲ್ಲ. ಎಲ್ಲಾ ಕಡೆಯೂ ಹೆಚ್ಚುಕಡಮೆ ಮಳೆ ಯಾಗಿದೆ, ಸ್ವಲ್ಪ ಬೆಳೆ ಬಂದಿದೆ. ಸ್ಕೇರ್‌ಸಿಟಿ ಕಾಮು ಗಾರಿ ಪ್ರದೇಶವೆಂದು ಅಫಿಷಿಯಲ್ಲಾಗಿ ಎಲ್ಲೂ ಡಿಕ್ಲೇರ್ ಮಾಡಿಲ್ಲ. Akin to scarcity areaದಲ್ಲಿ ಕಾಮು ಗಾರಿಗಳನ್ನು ಪ್ರಾರಂಭಿಸಲಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಯಾವ ಯಾವ ಭಾಗದಲ್ಲಿ ಬೆಳೆ ಹೋಗಿದೆ, ಎಲ್ಲೆಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಎಂಬುದಕ್ಕೆ ಕಮಿಟಿ ರಿಪೋರ್ಟುಗಳು ಬಂದಿವೆಯೇ ? ಅಧಿಕಾರಿಗಳ ರಿಪೋರ್ಟು ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಈ ಬಗ್ಗೆ ಪ್ರತಿ 15 ದಿವಸಕ್ಕೆ ಒಂದು ರಿಪೋರ್ಟು ತರಿಸುತ್ತೇವೆ.

Loan advanced to Kapila Textile Mills at Nanjangud.

Q.—3486. Sri Y. VEERAPPA (Holenarasipur).—

Will the Government be pleased to state :—

(*a*) whether it is a fact that they have advanced a loan of Rs. 10 lakhs to Kapila Textiles of Nanjangud, or stood as a security for Rs. 10 lakhs to the Bank of Mysore Limited, for having advanced Rs. 10 lakhs to the said Textile Mill ;

(*b*) the yearly income during the years 1952-56 ;

(*c*) the properties of the Mill and their estimated cost now ;

(*d*) whether they are aware that the Mill is at the stage of being closed and if so, the action they have taken to safeguard its investment and the interest of its nearly 2,000 employees and share-holders and what is the security offered ?

A.—Sri C. M. POONACHA (Minister for Home Affairs and Industries).—

(*a*) A loan of Rs. 10 lakhs has been advanced by the Bank of Mysore Limited, to the Kapila Textile Mills Limited, Nanjangud, on the guarantee of Government.

(*b*)

	Profit.	*Loss.*
1952-53 (July—June) ...	88,717-9-0.	...
1953-54 (,,) ...	61,670-7-7.	...
1954-55 (,,) ...	6,570-15-8.	...
1955-56 (,,) ...	...	36,856-0-0.

No depreciation has been provided for these years.